ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ನಡವಳಿಗಳು

ವಿಷಯ: ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ ಹಾಗು ಇನ್ಫೋರ್ಮೇಷನ್ ಸೈನ್ಸ್ & ಇಂಜಿನಿಯರಿಂಗ್ ಡಿಪ್ಲೊಮಾ ಪ್ರೋಗ್ರಾಂಗಳಲ್ಲಿ ಇನ್‌ಪ್ಲಾಂಟ್ ತರಭೇತಿಯನ್ನು ಸೇರ್ಪಡಿಸುವ ಬಗ್ಗೆ.

ಉಲ್ಲೇಖ: ಪ್ರೊ. ಎಂ.ಪಿ ಪುನಿಯಾ, ವೈಸ್ ಚೇರ್ಮೆನ್, ಎಐಸಿಟಿಇ ನವದೆಹಲಿ ಇವರ ಪತ್ರ ಸಂ. F.No.AICTE/Internship Policy-2018, ದಿನಾಂಕ: 13/08/2018.

ಪ್ರಸ್ತಾವನೆ:

ಉಲ್ಲೇಖಿತ ಎಐಸಿಟಿಇ ನವದೆಹಲಿ ಇವರ ಪತ್ರದನ್ವಯ ತಾಂತ್ರಿಕ ಶಿಕ್ಷಣದ ಎಲ್ಲಾ ಪ್ರೋಗ್ರಾಂಗಳಲ್ಲಿ ಅಭ್ಯಸಿಸುವ ವಿದ್ಯಾರ್ಥಿಗಳು ಇಂಟರ್ನ್‌ಶಿಫ್/ಇನ್‌ಪ್ಲಾಂಟ್ ತರಭೇತಿಯನ್ನು ಕಡ್ಡಾಯವಾಗಿ ಪಡೆಯಬೇಕಾಗಿರುತ್ತದೆ. ಈಗಾಗಲೇ 2015–16ನೇ ಸಾಲಿನಿಂದ ಜಾರಿಗೊಳಿಸಿದ ಸಿ–15 ಪಠ್ಯಕ್ರಮಗಳ ಎಲ್ಲಾ ಡಿಪ್ಲೊಮಾ ಪ್ರೋಗ್ರಾಂಗಳಲ್ಲಿ (ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ ಹಾಗು ಇನ್ಫೋರ್ಮೇಷನ್ ಸೈನ್ಸ್ & ಇಂಜಿನಿಯರಿಂಗ್ ಹೊರತುಪಡಿಸಿ) ಇನ್‌ಪ್ಲಾಂಟ್ ತರಭೇತಿಯನ್ನು ಅಳವಡಿಸಲಾಗಿದೆ.

ಪ್ರಯುಕ್ತ ನಿರ್ದೇಶನಾಲಯದ ಪಠ್ಯಕ್ರಮ ಅಭಿವೃದ್ಧಿ ಕೋಶವು ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ ಹಾಗು ಇನ್ಫೋರ್ಮೇಷನ್ ಸೈನ್ಸ್ & ಇಂಜಿನಿಯರಿಂಗ್ ಡಿಪ್ಲೊಮಾ ಪ್ರೋಗ್ರಾಂಗಳಲ್ಲಿ "Inplant Training" ತರಭೇತಿಯನ್ನು ಅಳವಡಿಸಲು ಪಠ್ಯಕ್ರಮವನ್ನು ತಯಾರಿಸಿದೆ ಹಾಗು ಈಗಾಗಲೇ C-15 ಪಠ್ಯಕ್ರಮದ 6ನೇ ಸೆಮಿಸ್ಟರ್‌ನಲ್ಲಿರುವ ಅಳವಡಿಸಿರುವ "Soft skills for IT professionals" ವಿಷಯದ ಬದಲಾಗಿ "Inplant Training" ತರಭೇತಿಯನ್ನು ಅಳವಡಿಸಿ 2018–19ನೇ ಸಾಲಿನಿಂದ ಜಾರಿಗೊಳಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿದೆ.

ಈ ಹಿನ್ನಲೆಯಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿರುತ್ತಾರೆ.

ಆದೇಶ ಸಂಖ್ಯೆ: ತಾಂ.ಶಿ.ಇ 27 ಸಿಡಿಸಿ (1) 2018 ಬೆಂಗಳೂರು, ದಿನಾಂಕ: 06–10–2018

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ರಾಜ್ಯದಲ್ಲಿನ ಎಲ್ಲಾ ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ ಹಾಗು ಇನ್ಫೋರ್ಮೇಷನ್ ಸೈನ್ಸ್ & ಇಂಜಿನಿಯರಿಂಗ್ ಡಿಪ್ಲೊಮಾ ಪ್ರೋಗ್ರಾಂಗಳ C-15 ಪಠ್ಯಕ್ರಮದ 6ನೇ ಸೆಮಿಸ್ಟರ್‌ನಲ್ಲಿರುವ "Soft skills for IT professionals" ವಿಷಯದ ಬದಲಾಗಿ "In plant Training" ತರಭೇತಿಯನ್ನು ಅಳವಡಿಸಲಾಗಿದೆ ಹಾಗು 2018–19ನೇ ಸಾಲಿನಿಂದ 6ನೇ ಸೆಮಿಸ್ಟರ್‌ನಲ್ಲಿ ಜಾರಿಗೊಳಿಸಲು ಅನುಮೋದನೆ ನೀಡಿದೆ.

ನಿರ್ದೇಶಕರು

ಗೆ: ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರು–ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು –ಸೂಕ್ತ ಕ್ರಮಕ್ಕಾಗಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು–ಮಾಹಿತಿಗಾಗಿ.
3. ಇ–ಗೌವರ್ನೆನ್ಸ್ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ–ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

ಅಡಕ: In plant Training ತರಭೇತಿಯ ಪಠ್ಯಕ್ರಮ ಹಾಗು ಸ್ಕೀಂ ಆಫ್ ಸ್ಟಡೀಸ್(CS&E ಮತ್ತು IS&E).